ಇನ್ನೊಂದೇ ಒಂದು ನೋಡಿ, ಇದು ಹೇಗಿದೆ ಹೇಳಿ, ಇದು ಏನು ಹೇಳುತ್ತದೆ ಹೇಳಿ ಎಂದೆಲ್ಲ ಕೇಳುತ್ತ ಅದು ಸೆರೆಸಿಕ್ಕ ಸಂದರ್ಭ, ಒದಗಿಬಂದ ಸನ್ನಿವೇಶ ಎಲ್ಲವನ್ನೂ ಬೇಡವೆಂದರೂ ವಿವರಿಸುತ್ತಿದ್ದರು. 'ಅದು ಏನೂ ಹೇಳ್ತಾಯಿಲ್ಲ, ಹೇಳ್ತಾ ಇರೋದು ನೀವಷ್ಟೆ...' ಎಂದು ಬೋಳೇಶಂಕರ ಕಿಚಾಯಿಸಿ, ತನ್ನ ಜೋಕಿಗೆ ತಾನೇ ಕಿಸಕ್ಕನೆ ನಕ್ಕಿದ್ದ.

ಹಾಗೇ ವಾಕಿಂಗ್ ಮಾಡುವ ನೆಪದಲ್ಲಿ ದಾರಿಯಲ್ಲಿ ಸಿಗುತ್ತಿದ್ದ ನಾಲ್ಕೈದು ಜನರ ಗುಂಪನ್ನು, ತಾನು ಇತ್ತೀಚೆಗೆ ತಾನೆ ತಮ್ಮ ತೋಟದ ಮನೆಗೆ ಸಂಸಾರವನ್ನು ವರ್ಗಾಯಿಸಿರುವುದಾಗಿ ಪರಿಚಯ ಮಾಡಿಕೊಳ್ಳುತ್ತ, ಹೊಸದಾಗಿ ಮೂವತ್ತು ನಲವತ್ತು ಎಂಬ ಚಿಬಿಲಿನೊಳಗೇ ಪ್ರಪಂಚ ಕಟ್ಟಿಕೊಂಡವರ ಎದುರು ತಾನು ಇಲ್ಲಿನ ಮೂಲ ನಿವಾಸಿ, ತನ್ನದು ಐದೆಕರೆಯ ತೋಟ ಎಂದು ಬಿಮ್ಮು ತೋರುತ್ತ ಅವರ ಹೊಟ್ಟೆ ಉರಿಸುತ್ತಿದ್ದರು. ಅವರೊಡನೆ ಸೇರಿಕೊಂಡು ಗುಡ್ಡ ಹತ್ತುವಾಗ, ಇಳಿಯುವವರಲ್ಲಿ ಯಾರಾದರೂ ಪರಿಚಯದವರು ಸಿಕ್ಕರೆ ಹೇಳದೇ ಕೇಳದೆ ಪುಸಕ್ಕನೆ ಅವರೊಂದಿಗೆ ಮಾತಾಡುತ್ತ ಇಳಿದುಬಿಡುವುದು, ಜೊತೆಗಿದ್ದವರು ಈತ ಕೇಳಿಸಿಕೊಳ್ಳುತ್ತಿದ್ದಾನೆ ಎಂದು ಮಾತಾಡುತ್ತಲೇ ಇರುತ್ತ ಅಪಹಾಸ್ಯಕ್ಕೀಡಾಗುವುದು; ಈ ಮಧ್ಯೆ ಇನ್ಯಾರಾದರೂ ಅಡ್ಡಸಿಕ್ಕರೆ ಅವರೊಂದಿಗೆ ಲೋಕಾಭಿರಾಮವಾಗಿ ಮಾತಾಡುತ್ತ ನಿಂತುಬಿಡುವುದು ಮಾಡುತ್ತಿದ್ದುದರಿಂದ ಕೆಲವೇ ದಿನಗಳಲ್ಲಿ ಎಲ್ಲರಿಂದಲೂ ಅವಜ್ಞೆಗೀಡಾಗಲಾರಂಭಿಸಿದ್ದರು ನಮ್ಮ ಕವಿವರ್ಯರು. ಅಂತದೇ ಸಂದರ್ಭದಲ್ಲಿ ಎದುರು ಸಿಕ್ಕವರು ಪ್ರೊ. ಕಾಳೇಶ್.

ಕಾಳೇಶ್ ಕಾಡಿನ ಮೂಲೆಯೊಂದರಲ್ಲಿ ಹುಟ್ಟಿಬೆಳೆದು ಕಾಲೇಜೊಂದರಲ್ಲಿ ಪಾಠ ಮಾಡುತ್ತಿದ್ದವರು, ಅಲ್ಲಿನ ಹೊಸವಿಸ್ತೀರ್ಣದಲ್ಲಿ ಒಂದು ಮನೆ ಕಟ್ಟಿಕೊಂಡು, ಹಿತ್ತಲಲ್ಲೇ ತೋಟಗಾರಿಕೆ ಮಾಡಿಕೊಂಡಿದ್ದರು. ಇದ್ದಕ್ಕಿದ್ದಂತೆ ಎದುರು ಕಂಡ ಪ್ರೊಫೆಸರರನ್ನ, 'ನೀವು ಕಾಳೇಶ್ ಅವರಲ್ಲವೇ... ಗೊತ್ತು ಬಿಡಿ, ಅನೇಕ ಕಡೆ ನಿಮ್ಮ ಭಾಷಣ ಕೇಳಿದೀನಿ... ಏನು ಸ್ವಾಮಿ ಯುಜಿಸಿ ಸ್ಕೇಲ್ ಬಂದಮೇಲೆ ಪಾಠ ಮಾಡೋದು ಬಿಟ್ಟು ತೋಟ, ಚೀಟಿನೆಲ್ಲ ಮಾಡ್ತಿದ್ದೀರಂತೆ... ಹೇಗಿದೆ ಲಾಭ, ಏನಾದ್ರೂ ಗಿಟ್ಟುತ್ತ...' ಎಂದು ಓತಪ್ರೋತವಾಗಿ ವ್ಯಂಗ್ಯದ ಚೆಂಡನ್ನು ಉರುಳಿಸಿದ್ದಕ್ಕೆ ಗಲಿಬಿಲಿಗೊಂಡ ಪ್ರೊಫೆಸರ್, ಪರಿಚಯವಿದ್ದೂ ಇಲ್ಲದಂತಾಗಿದೆಯಲ್ಲ ಎಂದು ತಮ್ಮ ನೆನಪಿನ ಕೋಶಕ್ಕೆ ಕೈಹಾಕಿ ಕೆರೆಯುವ ಹೊತ್ತಿಗೆ ಥಟ್ಟನೆ ಹೊಳೆದುಬಿಟ್ಟಿತು: ಅಕಾಡೆಮಿಯ ಮೀಟಿಂಗ್ ಮುಗಿಸಿ ಹೊರಬಂದಾಗ, ಬೇಡವೆಂದರೂ ಬಿಡದೇ ಹೊಟೆಲಿಗೆ ಎಳೆದುಕೊಂಡು ಹೋಗಿ, ಒಂದು ದೋಸೆಗೆ ಆರ್ಡರ್ ಮಾಡಿದ್ದು... ಆತ ತಂದುಕೊಟ್ಟಾಗ ಇನ್ನೊಂದು ಖಾಲಿಪ್ಲೇಟಿಗೆ ಚಟ್ಣಿ, ಪಲ್ಯ ಹಾಕಿಕೊಂಡು ಬರುವಂತೆ ಹೇಳಿದ್ದು... ದೋಸೆಯನ್ನು ಸ್ವಲ್ಪವೂ ಅಂಕುಡೊಂಕಾಗದಂತೆ ಚಮಚದಿಂದ ಅರ್ಧಕ್ಕೆ ಕತ್ತರಿಸಿ ಬೈಟು ಮಾಡಿದ್ದು.. ಅದು ತಿಂದಾದ ಮೇಲೆ ಹಸಿದ ಹೊಟ್ಟೆ ಇನ್ನೂ ಬೇಕು ಇನ್ನೂ ಬೇಕು ಎಂದು ಹಟ ಮಾಡುತ್ತಿದ್ದರೂ, 'ಸಾಕು ಸಾರ್, ನಂಗೆ ಇದೇ ಜಾಸ್ತಿ ಆಗೋಯ್ತು.. ಇದರಲ್ಲೇ ಒಂದರ್ಧ ನನ್ನ ಹೆಂಡತಿಗೆ ಪಾರ್ಸಲ್ ಮಾಡುಸ್ಕೊಳ್ಳೋಣ ಅಂತಿದ್ದೆ...' ಎಂದು ಎದ್ದುಬಂದದ್ದು... ಬೇಡವೆಂದರೂ ಬಿಡದೇ ಬಿಲ್ಲು ಕೊಟ್ಟದ್ದು... ಅವರತ್ತ ಹೋದ ಮೇಲೆ ಮತ್ತೆ ಹೋಟೆಲಿಗೆ ಹೋಗಿ ಫುಲ್‌ದೋಸೆ ತಿಂದದ್ದು... ಎಲ್ಲ ನೆನಪಾಗಿಬಿಟ್ಟಿತು. ಮಾರನೆ ದಿನ ಪತ್ರಿಕೆಯಲ್ಲಿ ಪ್ರಶಸ್ತಿ ಪಡೆದವರ ವಿವರ ಬಂದಾಗ, ತಮ್ಮ ಅನ್ನದಋಣ ತಿಂದೂ ತಮ್ಮ ಪುಸ್ತಕಕ್ಕೆ ಪ್ರಶಸ್ತಿ ಕೊಡಿಸದೇ ರಾಜಕೀಯ ಮಾಡಿದರೆಂದು ಸಿಕ್ಕಸಿಕ್ಕವರೆದುರು ಅಪಪ್ರಚಾರ ಮಾಡಿದ್ದ ವ್ಯಕ್ತಿ ಈತನೇ ಅಲ್ಲವೇ ಎನ್ನಿಸುತ್ತಿದ್ದಂತೆಯೇ; ಅದೆಲ್ಲ